ಪ್ರಕಾರಗಳು ಸೃಜನಶೀಲತೆಯ ಮೇಲೆ ಹಲಬಗೆಯ ಒತ್ತಾಯಗಳನ್ನು ಮಾಡುತ್ತವೆಯೇ?

ಮೂಲಭೂತವಾಗಿ ನಾನು ಕವಿ-ಮನುಷ್ಯ. ಆದರೂ ಇಲ್ಲಿಯ ತನಕ ಎರಡು ಕಾದಂಬರಿಗಳನ್ನು ಪ್ರಕಟ ಮಾಡಿದ್ದೇನೆ. ಕಾವ್ಯವು ತೀವ್ರ-ಸೂಕ್ಷ್ಮ ಸಂಗತಿ. ಅದನ್ನು ತತ್ವರವಾಗಿ ಕಟ್ಟಬೇಕು. ಒಂದು ಪದ ಅಥವಾ ನುಡಿಗಟ್ಟಿನ ತಪ್ಪು ಬಳಕೆಯು ಕವಿತೆಯ ವಸ್ತು ವಿಷಯವನ್ನು, ಕಾವ್ಯಾತ್ಮಕ ಸೌಂದರ್ಯವನ್ನು ನಾಶ ಮಾಡಿಬಿಡಬಹುದು. ಹಾಗಾಗಿ, 'ರುಚಿ'ಯ ಬಗೆಗೆ ಗಾಢಪ್ರಜ್ಞೆ ಉಳ್ಳ ಲೇಖಕರು ಕಾವ್ಯವನ್ನು ಗಂಭೀರವಾಗಿ ಪರಿಗಣಿಸುತ್ತಾರೆ.

ಕಾದಂಬರಿಯ ಬರವಣಿಗೆಯಲ್ಲಿ ಬಹಳ ಸ್ವಾತಂತ್ರ್ಯವಿರುತ್ತದೆ. ಅದು ವಿಶಾಲವಾದ ಚೌಕಟ್ಟು. ನಮ್ಮ ಅನುಕೂಲಕ್ಕೆ ಅನುಗುಣವಾಗಿ ಕಾದಂಬರಿಯನ್ನು ವಿಸ್ತರಿಸಬಹುದು ಅಥವಾ ವ್ಯಾಪಕಗೊಳಿಸಬಹುದು. ವಿವರವಾದ ಕಥನಗಳನ್ನು ಬಳಸಿ ಕಾದಂಬರಿಯನ್ನು ಬರೆಯಬಹುದು, ಆದರೆ ಕವಿತೆಯಲ್ಲಿ ಇಂತಹದ್ದಕ್ಕೆ ಅವಕಾಶವಿಲ್ಲ. ಕಾವ್ಯದಲ್ಲಿ ನಾವು ಯಾವ ವಿಸ್ತಾರ ಸಮಾಜವನ್ನು ತರಲಾಗದೋ ಅದು ಸುಲಭವಾಗಿ ಕಾದಂಬರಿಯಲ್ಲಿ ಜಾಗ ಪಡೆದುಕೊಂಡು ಬಿಡುತ್ತದೆ. ನಾನು ನಿರ್ದಿಷ್ಟವಾಗಿ ಕಾವ್ಯದ ಜೊತೆಗೆ ಇರುವವನಾದರೂ, ಸಮಾಜದ ಕೆಲವೊಂದು ಆಯಾಮಗಳ ಕುರಿತು ಸಾಮಾನ್ಯ ಜನರನ್ನು ಸೆಳೆಯಬೇಕೆಂಬ ಉದ್ದೇಶದಿಂದ ಕಾದಂಬರಿಯ ಯಾನಕ್ಕೆ ಇಳಿದೆ. ಕಾವ್ಯವು ಕೆಲವೇ ಕೆಲವರಿಗೆ ನಿರ್ದಿಷ್ಟವಾದದ್ದು, ಕಾದಂಬರಿಯದ್ದು ತೆರೆದ ಜಗತ್ತು. ಅವರವರ ಇಚ್ಛೆಗೆ ತಕ್ಕಂತೆ ಯಾರು ಎತ್ತ ಕಡೆಗಾದರೂ ಚಲಿಸುವ ಸ್ವಾತಂತ್ರ್ಯ ಇದ್ದೇ ಇದೆ.

◆ **ನಿಮ್ಮ ಬರಹಗಳು ಅಸ್ಸಾಮಿನ ಬುಡಕಟ್ಟು ಸಂಸ್ಕೃತಿ, ಸಮೃದ್ಧ ಜನಪದ ಪರಂಪರೆಯಿಂದ ಪ್ರಭಾವಿತಗೊಂಡಿವೆ ಎಂದು ಹೇಳಿದಿರಿ. ಜನಪದ ಸಾಹಿತ್ಯದ ಹಾಗಲ್ಲದೆ, ನಿಮ್ಮ ಕವಿತೆಗಳು ಸುಲಭವಾಗಿ ತಮ್ಮನ್ನು ತಾವು ಬಿಟ್ಟುಕೊಡದೆ ಪ್ರತಿಮೆ-ರೂಪಕಗಳಲ್ಲಿ ಬಚ್ಚಿಟ್ಟುಕೊಂಡು ಹಲವು ಸ್ತರದ ಅನುಭವಗಳಿಗೆ ತೆರೆದುಕೊಳ್ಳುತ್ತವೆ. ಇದನ್ನು ಅರ್ಥ ಮಾಡಿಕೊಳ್ಳುವುದು ಹೇಗೆ?**

ನನ್ನ ಕವಿತೆಗಳು ಸುಲಭವಾಗಿ ಅರ್ಥವಾಗುವುದಿಲ್ಲವೆಂದು ನೀವು ಹೇಳುತ್ತಿದ್ದೀರಾ? (ನಗು) ಈ ಕವಿತೆಗಳು ಹಲವು ಸ್ತರಗಳಲ್ಲಿ ಹರಡಿಕೊಂಡಿರುತ್ತವೆ. ಆದ್ದರಿಂದಲೇ ಅವುಗಳ ಸರಳವಾದ ಸಂವಹನ ಸಾಧ್ಯವಾಗುವುದಿಲ್ಲ ಅಥವಾ ನಿಮಗೆ ಹಾಗೆ ಅನ್ನಿಸುತ್ತದೆ. ಒಂದೇ ಕವಿತೆಯನ್ನು ಮತ್ತೆ ಮತ್ತೆ ಓದಿದಾಗ ಬೇರೆ ಬೇರೆ ಪದರಗಳಲ್ಲಿ ಅಡಗಿಕೊಂಡಿರುವ ಅರ್ಥಾಂತರಗಳು ಗಮನಕ್ಕೆ ಬರುತ್ತವೆ. ಕವಿತೆಯನ್ನು ಓದಿದ ನಂತರ ಅದರ 'ರುಚಿ'ಯನ್ನು ತನ್ನದೇ ಆದ ರೀತಿಯಲ್ಲಿ ಅನುಭವಿಸಲು ಒಬ್ಬ ಓದುಗನಿಗೆ/ಓದುಗಳಿಗೆ ಸಾಧ್ಯವಾಗಿದೆಯೇ ಎನ್ನುವುದು ಮುಖ್ಯವಾದ ವಿಷಯ. ಈ ಬಗೆಯ ಮೊದಲ ಹಂತದ ಗ್ರಹಿಕೆಯ ನಂತರ ಓದುಗರು ಕವಿತೆ ಏನು ಹೇಳುತ್ತಿದೆ ಎಂದು ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ. ಅಂಥವರಲ್ಲಿ ಅನೇಕರು ಕವಿತೆಯ ಅಂತರಂಗವನ್ನು ಪ್ರವೇಶಿಸುವ ಕೆಲಸದಲ್ಲಿ ಯಶಸ್ವಿಯಾಗುತ್ತಾರೆ. ಉಳಿದವರು ಸಂಪೂರ್ಣ ನಿರಾಶೆಯಿಂದ ಹಿಂದಿರುಗುತ್ತಾರೆ. ಕವಿತೆಯು ತನ್ನ ಸ್ವರೂಪದಲ್ಲಿಯೇ ಧ್ವನ್ಯಾತ್ಮಕವೂ, ರೂಪಕಗಳನ್ನು ಬಳಸುವಂಥದೂ ಆಗಿರುವುದರಿಂದ ಅದರ ಅಭಿವ್ಯಕ್ತಿಯು ಗದ್ಯದಷ್ಟು ನೇರವಲ್ಲ. ಆದ್ದರಿಂದ, ಕಾವ್ಯವು ತನ್ನನ್ನು ಅನಾವರಣ ಮಾಡಿಕೊಳ್ಳುವ ಬಗೆಯಲ್ಲಿ ಅಡಗಿರುವ ಅರ್ಥದ ಪದರಗಳು ಅದರ ಒಟ್ಟು ಆಕೃತಿಯ ಬೇರೆ ಬೇರೆ ಅಂಗಗಳಾಗಿರುತ್ತವೆ. ನನ್ನ ಕವಿತೆಯಲ್ಲಿ ನಾನು ಅರ್ಥಛಾಯೆಗಳನ್ನು ಬುದ್ಧಿಪೂರ್ವಕವಾಗಿ ಸೇರಿಸುವುದಿಲ್ಲ. ನೀವು ಕವಿತೆಯನ್ನು ಓದುತ್ತಾ ಹೋದಂತೆ ಅವು ಸಹಜವಾಗಿಯೇ ಮುನ್ನೆಲೆಗೆ ಬಂದು ನಿಮ್ಮನ್ನು ತಲುಪುತ್ತವೆ. ಇದು ನನ್ನ ಕಾವ್ಯಕ್ರಮ.

◆ **ನಮ್ಮ ದೇಶದ ಕಳೆದ ಮೂರು ದಶಕಗಳ ಸಾಂಸ್ಕೃತಿಕ ನೀತಿವಲಯದ ಕುರಿತು ನಿಮ್ಮ ಅಭಿಪ್ರಾಯವೇನು? ಧಾರ್ಮಿಕ ಮೂಲಭೂತವಾದ ಮತ್ತು ಜಾಗತೀಕರಣಗೊಳ್ಳುತ್ತಿರುವ ತಂತ್ರಜ್ಞಾನಗಳು ಯುವಜನರ ಮನಸ್ಸುಗಳ ಮೇಲೆ ಸಂಪೂರ್ಣ ಅಧಿಕಾರ ಸ್ಥಾಪಿಸಿವೆ. ಈ ಬದಲಾವಣೆಯನ್ನು**